ಪಿ.ಜೆ.ರಾಘವೇಂದ್ರ, ಮೈಸೂರು
*ಮದುವೆಯಾಗಿ ಮನೆಯಲ್ಲಿಯೇ ಇರುವ ಪುರುಷನನ್ನು ಹೋಮಿಯೋಪತಿ ಎನ್ನಬಹುದೇ?*




ಖಂಡಿತ; ಹಾಗೆಯೇ ಹಲೋ ಅನ್ನುವ ಬದಲು ಅಲೋ ಅನ್ನುವವನು ಅಲೋ ಪತಿ, ಕಾಡುಮೇಡು ಅಲೆಯುವವನು ನೇಚರೋಪತಿ.

ಎಚ್. ಸಿದ್ಧಾರ್ಥ ಹೆಬ್ಬಾರ್, ಈದು
*ಯಾವುದೇ ಕಾಲಕ್ಕೂ ಆಕರ್ಷಣೆ ಕಳೆದುಕೊಳ್ಳದ ವಸ್ತು ಯಾವುದು?*
ಲವ್ ಲೆಟರ್, ಅದೂ ಇತರರಿಗೆ ಬರೆದದ್ದು!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಪ್ರಿಯತಮೆಗೆ ನನ್ನ ರಕ್ತದಿಂದ ಪ್ರೇಮಪತ್ರ ಬರೆದು ಕೊಟ್ಟರೂ ಆ ರಕ್ತ ನಿಂದಾ ಅಥವಾ ಕೋಳೀದಾ? ಎಂದು ಸಂದೇಹಿಸುತ್ತಾಳಲ್ಲಾ...?*
ಬ್ಲಡ್ ಬ್ಯಾಂಕ್‌ನಿಂದ ತೀರಾ ದುಬಾರಿ ಎಂದು ಗೊಣಗುತ್ತಾ, ನೀವು ಮಾಂಸದಂಗಡಿಗೆ ಹೋದುದನ್ನು ಅವಳು ನೋಡಿದಳಂತೆ!

ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ
*ದೇವಸ್ಥಾನಗಳಲ್ಲಿ ಚಪ್ಪಲಿ ಕಳುವಾಗಿ ದೇವರ ಬಗ್ಗೆ ನಂಬಿಕೆ ಹೊರಟುಹೋಗಿದೆ?*



ನೆಮ್ಮದಿ, ಆರೋಗ್ಯ, ಮಕ್ಕಳನ್ನು ಕಳೆದುಕೊಂಡವರೇ ನಂಬಿಕೆ ಕಳೆದುಕೊಂಡಿಲ್ಲ, ಹಾಗಿರುವಾಗ... ನೀವು ದೈವಭಕ್ತರಲ್ಲ ಬಿಡಿ, ಚಪ್ಪಲಿಭಕ್ತರು!

ಕಲಾವಿದ ಸೀನು, ಚಿತ್ರದುರ್ಗ
*ಕೆಲವು ಹುಡುಗಿಯರು ಸ್ನೇಹ ಮಾಡಿಕೊಳ್ಳುವ ನೆಪದಲ್ಲಿ ಮಿಸ್ಡ್ ಕಾಲ್, ಬ್ಲಾಂಕ್ ಮೆಸೇಜ್ ಮಾಡುತ್ತಾರಲ್ಲಾ, ಏಕೆ?*
ತಮ್ಮ ಸಲುವಾಗಿ ದುಡ್ಡು ಬೋಳಿಸ್ಕೊಳ್ಳಕ್ಕೆ ಹುಡುಗ ರೆಡಿ ಇದಾನೋ ಇಲ್ಲವೋ ಅಂತ ತಿಳ್ಕೊಳ್ಳಕ್ಕೆ ಅದು ಟೆಸ್ಟ್ ಡೋಸ್.

ಆರಿಫ್, ದಾವಣಗೆರೆ
*ಒಂದು ಹುಡುಗ- ಹುಡುಗಿಯ ಪ್ರೀತಿಯ ನಡುವೆ ಇನ್ನೊಂದು ಹುಡುಗಿಯ ಪ್ರವೇಶವಾದರೆ ಮನಸ್ತಾಪಗಳೇ ಹೆಚ್ಚು, ಏಕೆ?*
ಎಲ್ಲರಿಗೂ ಗುಡ್ ಓಲ್ಡ್ ಈಶ್ವರನಂತೆ ಎರಡೆರಡನ್ನು ಮ್ಯಾನೇಜ್ ಮಾಡಕ್ಕೆ ಬರಲ್ಲ ಸಿಸ್ಟಾ!

ಎಂ.ಬಿ. ರಂಗಪ್ಪಶೆಟ್ಟಿ, ಮೋಕ
*ಹನಿಹನಿಗೂಡಿದ್ರೆ ಹಳ್ಳ, ತೆನೆತೆನೆಗೂಡಿದ್ರೆ ಬಳ್ಳ. ರಾಜಕೀಯ ಪುಢಾರಿಗಳೆಲ್ಲಾ ಒಂದುಗೂಡಿದ್ರೆ...?*
ಶ್ರೀಸಾಮಾನ್ಯನಿಗೆ ಆರಡಿ ಮೂರಡಿ ಹಳ್ಳ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಯಾವುದೇ ವಸ್ತು ಕೊಳ್ಳುವಾಗ ಚೌಕಾಶಿ ಮಾಡುವ ಹೆಂಗಸರು ಗಂಡ ಎಂಬ ವಸ್ತು ಆರಿಸಿಕೊಳ್ಳುವಾಗ ಏಕೆ ಚೌಕಾಶಿ ಮಾಡುವುದಿಲ್ಲ?*
ಕೈಬಿಟ್ಟುಹೋದರೆ ಅದಕ್ಕಿಂತಲೂ ಕೆಟ್ಟ ಮಾಡಲ್ ಸಿಗಬಹುದು ಎಂಬ ಭಯ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನೀವೂ ಸಹ ಬಲ್ಲಿದ್ದಾ, ಪ್ರವೀಣರೇ ರಾಮ್ ಜೀ?*
ಬಿಲ್ಲೆತ್ತೀ ಎತ್ತೀ ಹಣ ಕೊಟ್ಟೂ ಕೊಟ್ಟೂ ನಾನು ಬಿಲ್ಲಣನೇ ಆಗಿಬಿಟ್ಟದ್ದೇನೆ!

ಹಾಡ್ಯ ಬಿ. ಜಯಾನಂದ, ಮೈಸೂರು
*ಫಿಗರು, ಡಯಟ್ಟು ಅನ್ನೋ ಹುಡುಗೀರು ಎಂಗೇಜ್‌ಮೆಂಟ್ ಆದಮೇಲೆ ಇವನ್ನೆಲ್ಲಾ ಮರೆಯಲು ಕಾರಣವೇನು?*
boy ಸಿಕ್ಕಿದಮೇಲೂ ಬಾಯ್‌ರುಚಿ ತೀರಿಸಿಕೊಳ್ಳದಿರೋದು ದಡ್ಡತನವಲ್ಲವೇ!

ಎಂ.ಎನ್. ಸೋಮಶೇಖರ್, ಮೈಸೂರು
*ಕೈ ಕೆಸರಾಗದೆ ಬಾಯಿ ಮೊಸರು ಮಾಡಿಕೊಳ್ಳುವುದು ಹೇಗೆ?*
ಮೊಸರಿನ ಪ್ಯಾಕೆಟ್‌ಅನ್ನು ಕೆಸರಿನಲ್ಲಿ ಬೀಳಿಸದೆ ಎತ್ತಿ ಕುಡಿಯಿರಿ!

ಹೆಚ್.ಆರ್. ಕೌಶಿಕ್‌ರಾಜ್, ಹನುಮನಾಳು
*ಚಿಕ್ಕವರು ಏಕಾಂತವಾಗಿರುವ ಸ್ಥಳಕ್ಕೆ ದೊಡ್ಡವರು ಹೋಗಬಾರದಂತೆ. ದೊಡ್ಡವರು ಏಕಾಂತವಾಗಿರುವ ಸ್ಥಳಕ್ಕೆ ಚಿಕ್ಕವರು ಹೋದರೆ ತಪ್ಪಿಲ್ಲವಂತೆ. ಇದ್ಯಾವ ನ್ಯಾಯ ರಾಮ್...?*
ಸರಿಯೇ; ಚೆಲ್ಲಾಟ ಇರುವ ಕಡೆ ನೋ ಎಂಟ್ರಿ, ನರಳಾಟ ಇರುವ ಕಡೆ ಫ್ರೀ ಎಂಟ್ರಿ!

## ಬಹುಮಾನಿತ ಪ್ರಶ್ನೆ

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಬೆಲ್ಲ ಇದ್ದರೆ ಪಾಯಸ ಮಾಡು, ಮಂದಿ ಇದ್ದರೆ ಭಾಷಣ ಮಾಡು ಅಂತಾರಲ್ಲಾ, ಎರಡೂ ಇದ್ದರೆ...?*
ಭಾಷಣ ಮಾಡಿ, ಜನ ಕರಗುತ್ತಾರೆ. ಪಾಯಸ ಮಾಡಿಕೊಂಡು ಗಡದ್ದಾಗಿ ಕುಡಿಯಿರಿ!

ರಮೇಶ ಜಿ. ಬೊಂಗಾಳೆ, ಬೈಲಹೊಂಗಲ
*ಮಂಗನಿಂದ ಮಾನವ; ತದನಂತರ ಏನು ಸಾರ್?*
ಮದುವೆ; ನಂತರ ಮತ್ತೆ ಮಂಗ!

ಹೆಚ್.ಆರ್. ಕಡಿವಾಲ, ಬದಾಮಿ
*ಚಿತೆಗೂ, ಚಿಂತೆಗೂ ಏನು ವ್ಯತ್ಯಾಸ?*
ಚಿತೆ ಬದುಕಿರುವವನನ್ನು ಸುಡಲಾರದು, ಚಿಂತೆ ಸತ್ತವನನ್ನು ಸುಡಲಾರದು!

ಅಶೋಕ್ ಕುಮಾರ್, ಪುಣಚಾ ಗ್ರಾಮ
*ಭವಿಷ್ಯದ ಬಗ್ಗೆ ನಿಷ್ಕಾಳಜಿ ಇರುವವರಿಗೆ ನಿಮ್ಮ ಹಿತನುಡಿ?*
ತೀರಾ ನಿಷ್ಕಾಳಜಿ ತಪ್ಪು. ಕನಿಷ್ಠ ಒಂದು ಅಲ್ಯೂಮಿನಿಯಂ ತಟ್ಟೆ ಅಥವಾ ಜೋಳಿಗೆಯನ್ನಾದರೂ ಕೊಳ್ಳುವಷ್ಟು ಹಣ ಕೂಡಿ ಇಡಿ.

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
*ಹೈಹೀಲ್ಡ್ ಚಪ್ಪಲಿ ತೊಟ್ಟು ಕಾಂಗರೂ ತರಹ ನಡೆಯುವ ಲಲನಾಮಣಿಯರನ್ನು ಏನೆನ್ನಬೇಕು?*




ಏನೇನೂ ಅನ್ನಬೇಡಿ; ಹತ್ತಿರದ ಮೂಳೆತಜ್ಞನ ವಿಳಾಸ ಕೊಟ್ಟುಬಿಡಿ.

ಬಿ.ಎಸ್. ಮಳ್ಳೂರ, ಹಲಗತ್ತಿ
*ಗಂಡನಾದವನು ಹೆಂಡತಿಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಲು ಏನು ಮಾಡಬೇಕು?*
ತನ್ನ ಕೈಯಳತೆಗಿಂತಲೂ ಸಣ್ಣದಾದ ನಡು ಇರುವ ಹೆಣ್ಣನ್ನು ಮದುವೆಯಾಗಬೇಕು!

ಜಾಕೋಬ್ ಡಿಸೋಜ, ಕುರುವಳ್ಳಿ
*ತಾಯಿ ಎಂದರೆ ಹೇಗಿರಬೇಕು?*
ಹೆಣ್ಣಿನಂತೆ ಇದ್ದರೆ ಉತ್ತಮ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಪತ್ರಕರ್ತರಲ್ಲಿ ಮಾನವೀಯ ಮೌಲ್ಯಗಳು ಸತ್ತಾಗ ಉಳಿಯುವುದು ಏನು?*
ರೋಲ್‌ಕಾಲ್!

■ ರಾಮ್